# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20 ಗಂಗಾನಗರ.ಬೆಂಗಳೂರು.

ಸಂಖ್ಯೆ: ಸ.ಅ/ವಾ-20/ಪಿ.ಆರ್/ 03 /2022-23 ದಿನಾಂಕ:-07-06-20222

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 04-06-2022 ರಂದು ವಾರ್ಡ್ ನಂ:20 ಬಿ.ಬಿ.ಎಂ.ಪಿ ವಾರ್ಡ್ ಕಛೇರಿ, ಬಿಲ್ಲಪ್ಪ ಗಾರ್ಡನ್, ಗಂಗಾನಗರ, ಬೆಂಗಳೂರು ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**::ಸಭೆಗೆ ಹಾಜರಾಗಿದ್ದವರ ವಿವರಗಳು::**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಮೋಹನ್ ಕುಮಾರ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾಡ್ ನಂ: 20 |
| 2. | ಕಿಶೋರ್‌ಗೌಡ.ಎಸ್ ಪಾಟೀಲ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್), ವಾರ್ಡ್-20 |
| 3. | ಶ್ರೀ. ಕೃಷ್ಣಮೂರ್ತಿ ಬಿ.ಎಂ | ಕಿರಿಯ ಅಭಿಯಂತರರು (ಬೆಸ್ಕಾಂ) |
| 4. | ಶ್ರೀಮತಿ ಸುವರ್ಣದೇವಿ.ವೈ.ಬಿ | ಕೆಲಸ ಪರವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5. | ಶ್ರೀಮತಿ ಶಾಯಿದಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 6. | ಶ್ರೀ. ಜೀವನ್ ಗೌಡ.ಹೆಚ್.ಪಿ | ಕಿರಿಯ ಆರೋಗ್ಯ ಪರಿವೀಕ್ಷಕರು. |
| 7. | ಶ್ರೀಮತಿ ಡಾ.ದಿವ್ಯವಾಹಿ.ಜಿ | ಆರೋಗ್ಯಾಧಿಕಾರಿ ಗಂಗಾನಗರ. |
| 8. | ಶ್ರೀ. ಆನಂದ್ | ಮಾಜಿ ವಾರ್ಡ್ ಸದಸ್ಯರು |
| 9. | ಶ್ರೀ. ಎಂ.ಅರ್.ಪ್ರಸಾದ್ | ಸಾರ್ವಜನಿಕರು |
| 10. | ಶ್ರೀಮತಿ ವಿಜಯ ವಿ ಗೌಡ | ಸಾರ್ವಜನಿಕರು |
| 11. | ಶ್ರೀಮತಿ ಸುಮಾ ಶ್ರೀಧರ್ | ಸಾರ್ವಜನಿಕರು |
| 12. | ಶ್ರೀಮತಿ ಶಾಲಿನಿ ದೇಶಪಾಂಡೆ | ಸಾರ್ವಜನಿಕರು |
| 13. | ಶ್ರೀ.ಬಿಂಗಿ ಭೀಮಣ್ಣ | ಸಾರ್ವಜನಿಕರು |
| 14. | ಶ್ರೀ. ಎಲ್.ಶ್ರೀನಿವಾಸ್, ಬಿ.ಜೆ.ಪಿ | ಸಾರ್ವಜನಿಕರು |
| 15. | ಶ್ರೀ. ಶಿವಕುಮಾರ್. ಎ.ಎಂ | ಸಾರ್ವಜನಿಕರು |
| 16. | ಶ್ರೀ. ಶಿವಕುಮಾರ್.ಎಸ್. | ಸಾರ್ವಜನಿಕರು |
| 17. | ಶ್ರೀಮತಿ. ಉಮಾ ಹರಿಹರನ್ | ಸಾರ್ವಜನಿಕರು |
| 18. | ಶ್ರೀ. ಬಿ.ಎಸ್.ಶ್ರೀಧರ್ | ಸಾರ್ವಜನಿಕರು |
| 19. | ಶ್ರೀ. ಪಿ.ವಿ. ಜಗನ್ನಾಥ್ ರಾವ್ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ಮೋಹನ್‌ಕುಮಾರ್ ರವರು ಸಭೆಗೆ ಹಾಜರಾಗಿದ್ದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

Scanned with CamScanner

1. ವಾರ್ಡ್‌ನ ಮಾಜಿ ಕಾರ್ಪೊರೇಟರ್ ಆದ ಶ್ರೀ.ಆನಂದ್ ರವರು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಬೆಸ್ಕಾಂ ಇಲಾಖೆಯವರ ಜೊತೆ ಸಮಯೋಚಿಸಿ ಆಕ್ಷನ್ ಪ್ಲಾನ್ ಸಿದ್ದಪಡಿಸುವಂತೆ ಮನವಿ ಸಲ್ಲಿಸಿದರು.
2. ವಾರ್ಡ್‌ನ ಹೆಚ್.ಎಂ.ಟಿ ಬಡಾವಣೆಯ ಮತ್ತು 108 ಬಸ್ ನಿಲ್ದಾಣದಲ್ಲಿ ತಳ್ಳುವ ಗಾಡಿ ವ್ಯಾಪಾರಿಗಳಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯುಂಟಾಗಿದ್ದು, ಫುಟ್‌ಪಾತ್ ರೈಡ್ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಿದರು.
3. ಹೆಚ್.ಎಂ.ಟಿ ಬಡಾವಣೆಯ 4ನೇ ಅಡ್ಡರಸ್ತೆ ಹಾಗೂ 7ನೇ ಮುಖ್ಯರಸ್ತೆಯಲ್ಲಿ Slab ಹಾಳಾಗಿದ್ದು ಜನರಿಗೆ ಓಡಾಡಲು ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಸರಿಪಡಿಸಲು ಮನವಿಯನ್ನು ಸಲ್ಲಿಸಲಾಯಿತು.
4. ಗಂಗಾನಗರದಲ್ಲಿರುವ ಅನುಪಯುಕ್ತ ಸ್ತ್ರೀ ಶಕ್ತಿ ಭವನದ ಕಟ್ಟಡವನ್ನು ಪೌರಕಾರ್ಮಿಕರ ಭವನವನ್ನಾಗಿ ಮಾಡಿಕೊಡಬೇಕೆಂದು ವಾರ್ಡ್‌ನ ಮಾಜಿ ಸದಸ್ಯರಾದ ಶ್ರೀ. ಆನಂದ್‌ರವರು ಮನವಿ ಸಲ್ಲಿಸಿದರು.
5. ಬಿಂಗಿ ಭೀಮಣ್ಣ ರವರು ಮುಂದಿನ ಸಭೆಗಳಲ್ಲಿ ಈ ಸಭೆಗೆ ಹಾಜರಾಗದ ಇಲಾಖೆಗಳಾದ ಬೆಸ್ಕಾಂ, ತೋಟಗಾರಿಕೆ, ಅರಣ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೌಶಲ್ಯ ತರಬೇತಿ, ಬಿ.ಡಿ.ಎ ವಿಭಾಗ ಸಹಾಯಕ ಅಭಿಯಂತರರು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಸಭೆಗಳಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು.
6. ಭಿಂಗಿ ಭೀಮಣ್ಣರವರು ಮಾತನಾಡಿ ವಾರ್ಡ್ ಸಮಿತಿ ಸದಸ್ಯರಿಗೆ ಗೌರವಧನವನ್ನು ನೀಡಲು ಮನವಿ ಸಲ್ಲಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 20 ಗಂಗಾನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 20 ಗಂಗಾನಗರ

4/6/2022

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ

Scanned with CamScanner